ಶ್ರೀ ಡಿ. ವಿ. ಸದಾನಂದಗೌಡ : ಎರಡು ಮಂಗಗಳು ಸತ್ತುಹೋಗಿರುವ ಬಗ್ಗೆ ವರದಿಗಳಾಗಿವೆ. ಹತ್ತು ದಿವಸದ ಹಿಂದೆ ಈ ಒಂದು ಖಾಯಿಲೆಯ ಬಗ್ಗೆ ಪ್ರಸ್ತಾಪ ಬಂದಿದ್ದರೂ ಕೂಡ ಡಿ.ಹೆಚ್.ಓ. ರವರಿಗೆ ಇದನ್ನು ಗಮನಕ್ಕೆ ತಂದರೂ ಕೂಡ ಇನ್ನು ಕೂಡ ಮದ್ದು ಸಪ್ಲೈ ಆಗಿಲ್ಲ ಎಂದರೆ ಹೇಗೆ? ಅದರ ಬಗ್ಗೆ ಸರ್ಕಾರ ಗಮನವನ್ನು ಹರಿಸಬೇಕು.

ಶ್ರೀ ಎಂ. ಪಿ. ಪ್ರಕಾಶ್ (ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ ಇವರು ದಿನಾಂಕ : 3-3-99 ರಂದು ದೂರವಾಣಿಯ ಮೂಲಕ ತಿಳಿಸಿ ಬೀದಿಗುಡ್ಡ (ಬಳ್ಪೆ) ಗ್ರಾಮಕ್ಕೆ ಜಿಲ್ಲಾ ಆರೋಗ್ಯ ಮತ್ತು ಕುಂಟುಂಬ ಕಲ್ಯಾಣಾಧಿಕಾರಿ ಮತ್ತು ಇತರೆ ವೈದ್ಯರು ಭೇಟಿಕೊಟ್ಟಿರುತ್ತಾರೆ. ಅಲ್ಲಿ ಒಂದು ಕೋತಿ ಸತ್ತಿರುವುದು ಕಂಡು ಬಂದಿರುತ್ತದೆ. ಅದಕ್ಕೆ ಸಂಬಂಧಪಟ್ಟಂತೆ ಶವಪರೀಕ್ಷೆಯನ್ನು ಮಾಡಿ, ಕೋತಿಯ ಮೈ ಮೇಲಿನ ಉಣ್ಣೆಗಳನ್ನು ಪರೀಕ್ಷೆಗಾಗಿ ಕಳುಹಿಸಲಾಗಿದೆ. ಕೋತಿ ಸತ್ತ ಜಾಗದಲ್ಲಿ ಸುಮಾರು ಒಂದು ಎಕರೆ ಪ್ರದೇಶದಲ್ಲಿ ಪಾಲಿಡಾಲ್ ಕ್ರಿಮಿನಾಶಕವನ್ನು ಸಿಂಪಡಿಸಲಾಗಿದೆ. ಬೀದಿಗುಡ್ಡ ಗ್ರಾಮವು, ಪ್ರಾಥಮಿಕ ಆರೋಗ್ಯ ಕೇಂದ್ರ, ಸುಬ್ರಹ್ಮಣ್ಯ ವ್ಯಾಪ್ತಿಗೆ ಬರುತ್ತದೆ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಮತ್ತು ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ಗ್ರಾಮದಲ್ಲಿ ಜ್ವರದ ಸರ್ವೆಮಾಡಿ 25 ಜನರ ರಕ್ತದ ಸ್ಯಾಂಪಲ್ ಪರೀಕ್ಷೆಗಾಗಿ ಮಂಗಳೂರು ಮತ್ತು ಶಿವಮೊಗ್ಗಕ್ಕೆ ಕಳುಹಿಸಿರುತ್ತಾರೆ. ಎಲ್ಲಾ ರೋಗಿಗಳಿಗೆ ಔಷಧೋಪಚಾರದ ವ್ಯವಸ್ಥೆಮಾಡಲಾಗಿದೆ. ರೋಗನಿಯಂತ್ರಣದ ಬಗ್ಗೆ ವಿಚಾರಿಸಲು ಸಿಬ್ಬಂದಿಯನ್ನು ಈ ಗ್ರಾಮದಲ್ಲಿ ಬಿಡಲಾಗಿದೆ. ಒಬ್ಬ ರೋಗಿ ಸುಮಾರು 60 ವರ್ಷಕ್ಕಿಂತ ಹೆಚ್ಚಾಗಿರುವ ವ್ಯಕ್ತಿ ಮೃತರಾಗಿರುವುದಾಗಿ ವರದಿಯಾಗಿದೆ. ಈ ಘಟನೆಯನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಬರುವುದಕ್ಕೆ ಮುಂಚೆಯೇ ನಡೆದಿರುತ್ತದೆ.

ಮೇಲಿನ ಎಲ್ಲಾ ವಿಷಯಗಳಲ್ಲಿ ರೋಗಿಗಳಿಗೆ ಪರಿಹಾರವನ್ನು ನೀಡಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಾದ ಡಾ|| ಗುರುಸಿದ್ದಪ್ಪ ಇವರು ತಾವೇ ನಿಂತು ಕ್ರಮವನ್ನು ಜರುಗಿಸಿರುತ್ತಾರೆ. ರಕ್ತ ಪರೀಕ್ಷೆಯ ವರದಿ ಬಂದನಂತರ ಮಲೇರಿಯಾ ಅಥವಾ ಕೆ.ಎಫ್.ಡಿ. ಎಂದು ದೃಢಪಡಿಸಲಾಗುವುದು.

ಮಾನ್ಯ ಸದಾನಂದಗೌಡರು ಕೂಡ ಹೇಳಿದಂತೆ ಪಕ್ಕದ ಗ್ರಾಮದಲ್ಲಿಯೂ ಕೂಡ ಆಗಿದ್ದರೆ ಈ ಕೂಡಲೇ ಅವರಿಗೆ ಕಳುಹಿಸಿ ರಕ್ತದ ಸ್ಯಾಂಪಲ್‌ನ್ನು ಕಳುಹಿಸಿಕೊಡುವ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಆ) ಜಗನ್ನಾಥಶೆಟ್ಟಿ ಆಯೋಗದ ವರದಿ

ಶ್ರೀ ಶಿವಾನಂದ ನಾಯಕ್ : ಮಾನ್ಯ ಉಪಾಧ್ಯಕ್ಷರೇ, ನಾನು ಈ ವಿಷಯವನ್ನು ಪ್ರಸ್ತಾಪ ಮಾಡುವು ದಕ್ಕೆ ಹೋದಾಗ ಸಂಬಂಧಪಟ್ಟ ಸಚಿವರು ಇಲ್ಲ, ಇದನ್ನು ನಾಳೆ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದಿರಿ. ಜಗನ್ನಾಥ್‌ಶೆಟ್ಟಿ ಆಯೋಗದ ವರದಿ ಬಗ್ಗೆ ಈಗಾಗಲೇ ಸದನದಲ್ಲಿ ಸಾಕಷ್ಟು ಪ್ರಸ್ತಾಪ ಮಾಡಿದ್ದೇನೆ. ಆದರೆ ಸರ್ಕಾರ ಒಂದು ರೀತಿಯ ಹಾರಿಕೆಯ ಉತ್ತರವನ್ನು ಕೊಡುತ್ತಾ ಬಂದಿದೆ. ಇದರ ಪರಿಣಾಮವಾಗಿ ಭಟ್ಕಳದಲ್ಲಿ ಏನಾಗಿದೆ 1993 ರ ಪರಿಸ್ಥಿತಿ ಮತ್ತೆ ಬರುವ ಸಂದರ್ಭ ಬಂದಿದೆ. ಇದನ್ನು ಏಕೆ ನಾನು ಹೇಳುವುದಕ್ಕೆ ಇಷ್ಟು ಪಡುತ್ತೇನೆ ಎಂದರೆ ಈಗಾಗಲೇ ಜಗನ್ನಾಥ್‌ಶೆಟ್ಟಿ

ಆಯೋಗದ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ ತಕ್ಷಣ ಕೆಲವೊಂದು ಪತ್ರಿಕೆಗಳಲ್ಲಿ ಕೆಲವೊಂದು ವಿಷಯ ಬಂತು. ಅಲ್ಲಿ ನಿಜವಾಗಿಯೂ ಆ ಕೋಮು ಗಲಭೆಗೆ ಕಾರಣರಾಗಿರುವವರೆಲ್ಲ ಊರು ಬಿಟ್ಟು ಹೋದರು. ಭಯಭೀತರಾಗಿದ್ದರು. ಆದರೆ ಆ ವರದಿಯನ್ನು ಇವತ್ತು ಮುಚ್ಚಿಟ್ಟು ಪುನಃ ಅವರಿಗೆ ರಕ್ಷಣೆ ಕೊಡುವ ಕೆಲಸವನ್ನು ಸರ್ಕಾರ ಮಾಡಿದೆ. 1978,89,91,93 ರಲ್ಲಿ ನಿರಂತರವಾಗಿ ನಡೆದಿರುವ ಹತ್ತು ತಿಂಗಳ ಗಲಭೆಯಲ್ಲಿ 17 ಜನರ ಕೊಲೆಯಾಯಿತು. ನೂರಾರು ಅಂಗಡಿಯನ್ನೂ ಲೂಟಿ ಮಾಡಿದರು. 200 ಕ್ಕೂ ಹೆಚ್ಚಿನ ಮನೆಯನ್ನು ಲೂಟಿ ಮಾಡಿದರು. 100 ಮನೆಯನ್ನು ಸುಟ್ಟರು. ಈ ರೀತಿ ಕೋಟ್ಯಾಂತರ ರೂಪಾಯಿ ಸಾರ್ವಜನಿಕ ಆಸ್ತಿಯನ್ನು ಲೂಟಿ ಮಾಡಿದರು. ಇದಕ್ಕೆ ಯಾರು ಸಂಬಂಧಪಟ್ಟವರು. ಇದು ಯಾರಿಂದ ಆಯಿತು ಎಂದು ಜನರು ತಿಳಿದುಕೊಳ್ಳಬೇಕು. ರಾಜ್ಯದ ಜನರೂ ತಿಳಿದುಕೊಳ್ಳಬೇಕು. ಭಟ್ಕಳದ ಜನರು ತಿಳಿದುಕೊಳ್ಳಬೇಕು. ಆ ಒಂದು ಉದ್ದೇಶವನ್ನು ಇಟ್ಟುಕೊಂಡು ಜಗನ್ನಾಥಶೆಟ್ಟಿ ಆಯೋಗವನ್ನು ನೇಮಕ ಮಾಡಿದರು. ಆ ವರದಿಯನ್ನು ಕೊಟ್ಟು ಇವತ್ತು ಎರಡೂವರೆ ವರ್ಷವಾಗಿದೆ. ಎರಡೂವರೆ ವರ್ಷವಾದರೂ ಇದನ್ನು ಸರ್ಕಾರ ಮುಚ್ಚಿಟ್ಟು ಕೊಲೆ ಗಡುಕರಿಗೆ ರಕ್ಷಣೆ ಕೊಡುವ ಕೆಲಸವನ್ನು ಇವತ್ತು ಜನತಾದಳದ ಸರ್ಕಾರ ಮಾಡುತ್ತಿದೆ. ಆವತ್ತಿನ ಮುಖ್ಯಮಂತ್ರಿಗಳು ಹೇಳಿಕೆ ಕೊಡುತ್ತಿದ್ದರು. ಇದನ್ನು ಆರ್‌ಎಸ್‌ಎಸ್ ಬಿಜೆ.ಪಿ, ವಿಶ್ವ ಹಿಂದೂ ಪರಿಷತ್‌ನವರು ಮಾಡುತ್ತಿದ್ದಾರೆಂದು ಹೇಳಿಕೆ ಕೊಡುತ್ತಿದ್ದರು. ಇವತ್ತು ಯಾರ್‍ಯಾರು ಇದ್ದಾರೆ, ಯಾರ್‍ಯಾರು ಇದಕ್ಕೆ ಕಾರಣರಾಗಿದ್ದಾರೆ ಎಂದು ಸ್ಪಷ್ಟವಾಗಿ ವರದಿಯಲ್ಲಿ ಕೊಟ್ಟಿದ್ದಾರೆ. ಆ ವರದಿಯನ್ನು ಮುಚ್ಚಿಟ್ಟು ಆವತ್ತಿನ ರಾಜಕಾರಣಿಗಳನ್ನು ರಕ್ಷಣೆ ಮಾಡುತ್ತಿದೆ, ಕೊಲೆಗಡುಕರನ್ನು ರಕ್ಷಣೆ ಮಾಡುವುದನ್ನು ಜನತಾದಳ ಸರ್ಕಾರ ಮಾಡುತ್ತಿದೆ. ಇದರ ಬಗ್ಗೆ ಸ್ಪಷ್ಟವಾದ ಉತ್ತರವನ್ನು ನಾನು ನಿರೀಕ್ಷೆ ಮಾಡುತ್ತಿದ್ದೇನೆ. ಈ ವರದಿಯನ್ನು ಯಾವಾಗ ಮಂಡಿಸುತ್ತಿದ್ದೀರಿ. ಇದರ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಕೊಡಬೇಕು.

ಶ್ರೀ ಕೆ. ಜಯರಾಮಶೆಟ್ಟಿ : ಮಾನ್ಯ ಉಪಾಧ್ಯಕ್ಷರೇ, ಎಲ್ಲದ್ದಕ್ಕೂ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಉತ್ತರ ಕೊಟ್ಟರೆ ಹೇಗೆ ಆಗುತ್ತದೆ? ನಿನ್ನೆ ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಡಬೇಕೆಂದು ಹೇಳಿದ್ದರು. ನಿನ್ನೆ ಆ ರೀತಿ ಹೇಳಿದ್ದರು. ಇವತ್ತೂ ಕೂಡ ಆ ಮಂತ್ರಿಗಳು ಇಲ್ಲ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಈಗ ರಿಸರ್ವೇಷನ್ ಇನ್ ಪ್ರಮೋಷನ್ ವಿಚಾರದಲ್ಲಿಯೂ ಕೂಡ ಒಂದು ಚರ್ಚೆ ನಡೆಯುತ್ತಿದೆ. ಅನೇಕರು ಸಂಬಂಧಪಟ್ಟ ಖಾತೆಯ ಮಂತ್ರಿಗಳೂ ಕೂಡ ಅಲ್ಲಿದ್ದಾರೆ. ಈ ಅಧಿವೇಶನದ ಕೊನೆಯ ಸಂದರ್ಭಗಳಲ್ಲಿ ಮೇಲ್ಮನೆಯಲ್ಲಿ ಕೆಲವು ಜನ ಮಂತ್ರಿಗಳು ಕರ್ತವ್ಯದ ಮೇಲೆ ನಿರತರಾಗಿದ್ದಾರೆ. ಮಾನ್ಯ ಸಭಾಧ್ಯಕ್ಷರು ಮತ್ತು ಮುಖ್ಯಮಂತ್ರಿಗಳು ಕರೆದಿರುವ ವಿಚಾರದಲ್ಲಿ ಕೂಡ ಅಲ್ಲಿ ಕೆಲವರು ಭಾಗವಹಿಸಿದ್ದಾರೆ. ಆ ಕಾರಣದಿಂದ ನಾನು ಉತ್ತರ ಕೊಡುತ್ತಿದ್ದೇನೆಯೇ ವಿನಹಾ ಸರ್ಕಾರ ಯಾರ ಪರವಾಗಿ ರಕ್ಷಣೆ ಕೊಡಬೇಕಾಗಿರುವುದು ಏನೂ ಇಲ್ಲ. ತಾವು ಈಗಲೂ ಸಹಾ ಶೂನ್ಯವೇಳೆಯಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ. ಚಿತ್ತರಂಜನ್‌ರವರ ಕೊಲೆಗೆ ಸಂಬಂಧಪಟ್ಟ ಜಗನ್ನಾಥ್‌ಶೆಟ್ಟಿ ಸಮಿತಿಯವರು ಕೊಟ್ಟಿರುವ ಎರಡು ವರದಿಗಳಿವೆ. ಈಗಾಗಲೇ ಇದನ್ನು ಪರಿಶೀಲಿಸಿದೆ. ಸದನದಲ್ಲಿ ಮಂಡಿಸಬೇಕು ಎಂದು ತಾವು ಕೇಳುತ್ತಿದ್ದೀರಿ. ಈಗ ಮಾನ್ಯ ಕಾನೂನು ಸಚಿವರು ಸಭಾನಾಯಕರಾಗಿದ್ದಾರೆ. ಅವರ

ಜೊತೆಗೆ ಮಾತನಾಡಿ ಮಧ್ಯಾಹ್ನದ ಒಳಗಾಗಿ ಈ ವಿಚಾರದಲ್ಲಿ ಸೂಕ್ತವಾದ ಉತ್ತರವನ್ನು ನಾನು ಕೊಡಿಸುತ್ತೇನೆ.

ಆ) ಕೃಷ್ಣ ಮೇಲ್ದಂಡೆ ಯೋಜನೆಯಡಿಯಲ್ಲಿ ನಿರಾಶ್ರಿತರಿಗೆ ಪರಿಹಾರ

ಶ್ರೀ ಪ್ರಹ್ಲಾದ ಹನುಮಂತಪ್ಪ ಪೂಜಾರ್ (ಬಾಗಲಕೋಟೆ) : ಮಾನ್ಯ ಉಪಸಭಾಪತಿಯವರೆ, ನಾನುಕೇಳುತ್ತಿರುವುದು ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರಾದ ನಾಗೇಗೌಡರಿಗೆ ಸಂಬಂಧಿಸಿರುವ ಪ್ರಶ್ನೆಯಾಗಿದ್ದು ಅವರು ಈಗ ಸದನದಲ್ಲಿ ಇದ್ದಿದ್ದರೆ ಅನುಕೂಲವಾಗುತ್ತಿತ್ತು ಎನ್ನುವ ಭಾವನೆ ನನ್ನದಾಗಿದೆ. ಕೃಷ್ಣಾ ಮೇಲ್ದಂಡೆ ಯೋಜನೆಯಡಿಯಲ್ಲಿ ನಿರಾಶ್ರಿತರಾದಂಥ ಸಂತ್ರಸ್ತರ ಮಕ್ಕಳಿಗೆ ಸರ್ಕಾರಿ ಸೇವೆಯಲ್ಲಿ ಆರಕ್ಷಣೆ ನೀಡುವ ಕುರಿತು ಸದನದ ಗಮನ ಸೆಳೆಯಬಯಸುತ್ತಿದ್ದೇನೆ. ಸದರಿ ಯೋಜನೆಯಡಿ ಬಾಗಲಕೋಟೆ ನಗರದ 2-3ರಷ್ಟು ಭಾಗ ಸೇರಿದಂತೆ ಸುಮಾರು 156 ಹಳ್ಳಿಗಳು ಮುಳುಗಡೆಯಾಗುತ್ತಿದ್ದು ಸರ್ಕಾರದ ಅಂದಾಜಿನಂತೆ ನಾಲ್ಕು ಲಕ್ಷದಷ್ಟು ಜನರನ್ನೊಳಗೊಂಡಿರುವ ಒಂದು ಲಕ್ಷ ಕುಟುಂಬಗಳು ಮುಳುಗಡೆಯಾಗುತ್ತಿರುವ ಸಂದರ್ಭದಲ್ಲಿ ಒಂದು ಅರ್ಥ ನಾವು ಕಲ್ಪಿಸಬಹುದು. ಏನೆಂದರೆ, ಸರ್ಕಾರದ ಈ ಬೃಹತ್ ಯೋಜನೆಯಿಂದ ಸುಮಾರು ನಾಲ್ಕು ಲಕ್ಷದಷ್ಟು ಜನರ ಉದ್ಯೋಗಗಳನ್ನು ಬಲವಂತವಾಗಿ ಸರ್ಕಾರ ಕಸಿದುಕೊಂಡು ಅವರುಗಳನ್ನು ನಿರುದ್ಯೋಗಿಗಳನ್ನಾಗಿ ಮಾಡಿದೆ. ಈ ದಿಸೆಯಲ್ಲಿ ಮಾನ್ಯ ಉಪಾಧ್ಯಕ್ಷರ ಮೂಲಕ ಸರ್ಕಾರವನ್ನು ಕೇಳಲಿಚ್ಛಿಸುವುದೇನೆಂದರೆ 'ನಾವು ನಿರುದ್ಯೋಗ ಸಮಸ್ಯೆಯನ್ನು ದೂರ ಮಾಡುತ್ತಿದ್ದು, ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತಿದ್ದೇವೆ' ಎಂದು ಸರ್ಕಾರ ಅನೇಕ ವರ್ಷಗಳಿಂದ ಭರವಸೆಗಳನ್ನು ಕೊಡುತ್ತಿದೆ. ಇಂತಹ ಬೃಹತ್ ಯೋಜನೆಗಳನ್ನು ಹಮ್ಮಿಕೊಳ್ಳುವ ಮೂಲಕ ಸರ್ಕಾರ ಅವರುಗಳನ್ನು ಬಲವಂತವಾಗಿ ನಿರುದ್ಯೋಗಿಗಳನ್ನಾಗಿ ಮಾಡುತ್ತಿರುವುದರಿಂದ ಅವರಿಗೆ ಉದ್ಯೋಗ ದೊರಕಿಸಿಕೊಡುವುದಾಗಲಿ ಇಲ್ಲವೇ ಅವರಿಗೆ ಜೀವನೋಪಾಯ ಮಾಡಲು ಬೇರೆ ದಾರಿ ಹುಡುಕಿಕೊಡುವುದು ಸರ್ಕಾರದ ಉತ್ತರದಾಯಿತ್ವವಲ್ಲವೇ? ಎಂದು ಪ್ರಶ್ನಿಸುತ್ತಿದ್ದೇವೆ. ಹಿಂದಿನ ಸಚಿವರಾದ ಕೆ.ಎನ್.ನಾಗೇಗೌಡರು ನೀರಾವರಿ ಯೋಜನೆಯಡಿ ಜಮೀನು, ಮನೆ, ಮಠ ಕಳೆದುಕೊಂಡಂಥ ನಿರಾಶ್ರಿತ ಸಂತ್ರಸ್ತ ಮಕ್ಕಳಿಗೆ ಸರ್ಕಾರಿ ಸೇವೆಯಲ್ಲಿ ಶೇಕಡ ಹತ್ತರಷ್ಟು ಮೀಸಲಾತಿ ಕಲ್ಪಿಸಿಕೊಡುವುದಾಗಿ ಭರವಸೆ ನೀಡಿದ್ದರು. ಇವೊತ್ತಿನವರೆವಿಗೂ ಆ ಕುರಿತು ಯಾವುದೇ ಆದೇಶ ಸರ್ಕಾರದಿಂದ ಹೊರಬಿದ್ದಿಲ್ಲ. ಇದರಿಂದಾಗಿ ಇವೊತ್ತು ಸಂತ್ರಸ್ತ ಮಕ್ಕಳೆಲ್ಲರೂ ತುಂಬಾ ಚಿಂತೆಯಲ್ಲಿದ್ದಾರೆ ಮತ್ತು ಸಾಯಲೂ ಆಗದ, ಬದಕಲೂ ಆಗದ ಪರಿಸ್ಥಿತಿಯಲ್ಲಿದ್ದು, ಸರ್ಕಾರದ ನಿರ್ಧಾರಕ್ಕಾಗಿ ಜಾತಕ ಪಕ್ಷಿಯಂತೆ ಕಾಯುತ್ತಿದ್ದಾರೆ. ಸರ್ಕಾರ ಒಳ್ಳೆಯ ತೀರ್ಮಾನ ತೆಗೆದುಕೊಂಡು ನಿರಾಶ್ರಿತ ಸಂತ್ರಸ್ತರ ಮಕ್ಕಳಿಗೆ ಸರ್ಕಾರಿ ಸೇವೆಯಲ್ಲಿ ಶೇಕಡ 10ರಷ್ಟು ಮೀಸಲಾತಿ ಅಥವಾ ಅದಕ್ಕಿಂತ ಹೆಚ್ಚು ಶೇಕಡಾದಷ್ಟು ಮೀಸಲಾತಿ ಕಲ್ಪಿಸಿಕೊಡುವ ಮೂಲಕ ಒಂದು ಲಕ್ಷ ಕುಟುಂಬದ ಜನರಿಗೆ ದಾರಿದೀಪವಾಗಬೇಕು. ಈ ನಿಟ್ಟಿನಲ್ಲಿ ಸರ್ಕಾರದಿಂದ ನಿರ್ದಿಷ್ಟವಾದ ಉತ್ತರವನ್ನು ಅಪೇಕ್ಷಿಸುತ್ತಿದ್ದೇನೆ.

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಶಾಸಕರು ಮಾತನಾಡುತ್ತಾ ನಾವು ಅಧಿಕಾರಾವಧಿಯ ಕೊನೆಯಲ್ಲಿದ್ದೇವೆಂದು